ಅಸಲು ದಾವಾ ಸಂಖ್ಯೆ . 284 - 2013

ಪಿ.ಡಬ್ಲ್ಯೂ-4
ದಿಃ 24-09-2019
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ನಾನು ಪಿಯುಸಿ ವರೆಗೆ ವಿದ್ಯಾಭಾಸ ಮಾಡಿರುತ್ತೇನೆ . ಸರ್ವೆ ನಂ 19/1 ಬಿ ಮತ್ತು ಸರ್ವೆ ನಂ 112/1 ರ ಮೇಲೆ ದಾವೆ ಹೂಡಲಾಗಿದೆ ಎಂದರು . ಮಲ್ಲಪ್ಪ ಮತ್ತು ಪರಮೇಶ್ವರಪ್ಪ ರವರು ಉಳಿದವರ ಮೇಲೆ ದಾವೆ ಹೂಡಿರುತ್ತಾರೆ . ಸದರಿ ವಿಚಾರವನ್ನು ನಾನು ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ . ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ 1 ನೇ ವಾದಿ ಮತ್ತು 2 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ . ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಪ್ರಮಾಣ ಪತ್ರಕ್ಕೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . 2 ನೇ ಪ್ರತಿವಾದಿಯು ಪರಮೇಶ್ವರಪ್ಪ ರವರ ವಿರುದ್ಧ ಹೂಡಿರುವ ದಾವೆಯಲ್ಲಿ ನಾನು ಸಾಕ್ಷ್ಯ ನುಡಿದಿರುತ್ತೇನೆಂದರೆ ಸರಿ .

ಮರುವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.